

# ವಿದ್ಯೆಗಿಂತ ಯಾವುದೂ ದೊಡ್ಡದಲ್ಲ

■ ಅರವಿಂದ ಜಿ. ಜೋಷಿ
ಕಲೆ: ಸಂತೋಷ್ ಸಸಿಹಿತ್ಲು

ಮುಸಲ ದೇಶದ ಚಂದ್ರಮೌಳಿ ಎಂಬ ರಾಜ ಶಕ್ತಿಶಾಲಿ ಹಾಗೂ ದಯಾಳು ಆಗಿದ್ದ. ಒಂದು ದಿನ ಆತ ತನ್ನ ಆಪ್ತ ಸೇವಕರೊಂದಿಗೆ ಅಡವಿಗೆ ಬೇಟೆಯಾಡಲು ಹೋಗಿದ್ದ. ಕೆಲ ನಿಮಿಷಗಳ ಬಳಿಕ ಆಕಾಶದ ತುಂಬ ಕರಿ ಮೋಡ ಮುಸುಕಿ ಭಾರಿ ಜೋರಾಗಿ ಮಳೆ ಸುರಿಯಲಾರಂಭಿಸಿತು. ಅದರ ಜೊತೆ ಹಗಲು ಸರಿದು ಕತ್ತಲಾಗುತ್ತಾ ಬಂದಿತು. ರಾಜ ಮಳೆಯಿಂದ ತಪ್ಪಿಸಿಕೊಳ್ಳಲು ಅತ್ತ ಇತ್ತ ಓಡುತ್ತಾ ತನ್ನ ಅರಮನೆಯ ದಾರಿ ತಪ್ಪಿಸಿಕೊಂಡ. ಅದಲ್ಲದೆ ಬಂದಿದ್ದ ಆಪ್ತ ಸೇವಕರಿಂದಲೂ ಬೇರ್ಪಡೆಯಾಗಿ ಒಂದು ಪಾಳು ಗುಡಿಯ ಮುಂದೆ ನಿಂತಿದ್ದ. ಅಷ್ಟರಲ್ಲಿ ಆತನಿಗೆ ಹೊಟ್ಟೆ ತುಂಬಾ ಹಸಿಯಲು ಆರಂಭವಾಗಿತ್ತು. ಕೆಲ ನಿಮಿಷಗಳ ನಂತರ ಮಳೆ ಕಡಿಮೆ ಆಯಿತು. ಅಲ್ಲಿ ಮೂವರು ಬಾಲಕರು ರಾಜನಿಗೆ ಕಾಣಿಸಿದರು. ಆ ಮೂವರೂ ಬಾಲಕರು ಆ ಕಾಡಿನ ಅಂಚಿನಲ್ಲಿ ಇದ್ದ ಗ್ರಾಮದವರಾಗಿದ್ದರು. ರಾಜ ಅವರನ್ನು ಕೂಗಿ ಕರೆದು 'ತನಗೆ ತುಂಬಾ ಹಸಿವು ಆಗುತ್ತಿದೆ, ಇಲ್ಲಿ ಎಲ್ಲಾದರೂ ತಿನ್ನಲು ಆಹಾರ ಸಿಗುತ್ತಾ?' ಎಂದು ಕೇಳಿದನು.

ರಾಜ ಕೇಳಿದ ಪ್ರಶ್ನೆಗೆ ಆ ಬಾಲಕರು 'ಖಂಡಿತ ಸಿಗುತ್ತದೆ. ನೀವು ಇಲ್ಲೇ ಇರಿ. ತಂದು ಕೊಡುತ್ತೇವೆ' ಎಂದು ಹೇಳಿ ಅವರು ಓಡಿ ಹೋಗುತ್ತಾರೆ. ಅರ್ಧ ಗಂಟೆ ಬಿಟ್ಟು ಆ ಬಾಲಕರು ರಾಜನಿಗೆ ತಮ್ಮ ಮನೆಯಿಂದ ಊಟ, ನೀರು ತಂದು ಕೊಡುತ್ತಾರೆ. ಅವರು ತಂದಿದ್ದ ಊಟ ಮಾಡಿ, ನೀರು ಕುಡಿದ ರಾಜನು ತೃಪ್ತಿಪಡುತ್ತಾನೆ. ಅವರು ಸಕಾಲಕ್ಕೆ ಮಾಡಿದ ಉಪಕಾರಕ್ಕೆ ಪ್ರಸನ್ನನಾಗಿ: 'ಮಕ್ಕಳೆ, ನೀವು ಏನಾಗಬಯಸುವಿರಿ' ಎಂದು ಪ್ರತಿಯೊಬ್ಬರಿಗೂ ಪ್ರತ್ಯೇಕವಾಗಿ ಕೇಳುತ್ತಾನೆ. ಆಗ ಮೊದಲನೇ ಬಾಲಕ ಸ್ವಲ್ಪ ಹೊತ್ತು ಯೋಚನೆ ಮಾಡಿದವ 'ನನಗೆ ಹಣವಂತನಾಗಬೇಕು ಎನ್ನುವ ಆಸೆಯಿದೆ. ಏಕೆಂದರೆ, ನಾನು ಈ ತನಕ ಎರಡು ಹೊತ್ತು ಸರಿಯಾಗಿ ಊಟ ಮಾಡಿಲ್ಲ. ನೀವು ಹಣ ಕೊಟ್ಟರೆ ನನ್ನ ಆಸೆ ಪೂರೈಸಿಕೊಳ್ಳುವೆ' ಎಂದು ಉತ್ತರಿಸುತ್ತಾನೆ.

ರಾಜ ಎರಡನೇ ಬಾಲಕನಿಗೆ ಪ್ರಶ್ನೆ ಮಾಡಿದಾಗ ಆತ 'ಸ್ವಾಮಿ, ನನಗೆ ಇರಲು ಮನೆ ಇಲ್ಲ. ಗುಡಿಸಿಲಿನಲ್ಲಿ ವಾಸ ಮಾಡುತ್ತಿದ್ದೇವೆ. ಮಳೆ ಬಂದಾಗ ತುಂಬಾ ಕಷ್ಟ. ಅದಕ್ಕೆ ನಮಗೆ ಒಂದು ಚೆನ್ನಾಗಿರುವ ಮನೆ, ಓಡಾಡಲು ಕುದುರೆ ಗಾಡಿ ಕೊಡಿ ಸಾಕು' ಎನ್ನುತ್ತಾನೆ. ರಾಜನು ಈಗ ಮೂರನೇ ಬಾಲಕನಿಗೆ ಪ್ರಶ್ನೆ ಕೇಳಿದಾಗ ಆತ 'ಸ್ವಾಮಿ, ನನಗೆ ಹಣ–ಅಂತಸ್ತು ಏನೂ ಬೇಡ. ನಾನು ಚೆನ್ನಾಗಿ ಓದಿ ಪಂಡಿತನಾಗಿ ಈ ದೇಶದ ಜನರ ಸೇವೆ ಮಾಡಬೇಕು ಅದಕ್ಕೆ ತಾವು ಆಶೀರ್ವಾದ ಮಾಡಿ ಸಹಕರಿಸಿ ಸಾಕು' ಎಂದು ಹೇಳಿ ಕೈ ಮುಗಿಯುತ್ತಾನೆ. ಎರಡು ಮೂರು ದಿನಗಳ ನಂತರ ರಾಜ ಮೊದಲನೇ ಬಾಲಕನಿಗೆ ಸಾಕಷ್ಟು ಧನವನ್ನು, ಎರಡನೇ ಬಾಲಕ ಕೇಳಿದಂತೆ ದೊಡ್ಡ ಮನೆ ಹಾಗೂ ಕುದುರೆ ಗಾಡಿಯನ್ನೂ ಕೊಟ್ಟು ಮೂರನೇ ಬಾಲಕ ಇಚ್ಛೆಪಟ್ಟಂತೆ ಆತನಿಗೆ ಒಳ್ಳೆಯ ಗುರುಗಳ ಬಳಿ ಓದು ಬರಹ ಕಲಿಯಲು ಎಲ್ಲ ರೀತಿಯ ಅನುಕೂಲವನ್ನು ಮಾಡಿಕೊಡುತ್ತಾನೆ.

ಕೆಲವು ವರ್ಷಗಳ ನಂತರ ರಾಜನ ಆಶೀರ್ವಾದ ಹಾಗೂ ಸಹಾಯದಿಂದ ವಿದ್ಯಾವಂತನಾದವ ರಾಜನ ಬಳಿ ಬಂದಾಗ ಆತನ ವಿದ್ವತ್ತು, ಬುದ್ಧಿವಂತಿಕೆ ಕಂಡ ರಾಜನು ತನ್ನ ಆಸ್ಥಾನದಲ್ಲಿ ಮಂತ್ರಿ ಪದವಿ ಕೊಡುತ್ತಾನೆ. ಹೀಗಿರುವಾಗ ಆ ರಾಜನಿಗೆ ಹಿಂದಿನ ಘಟನೆ ನೆನಪಾಗಿ ಉಳಿದ ಇಬ್ಬರ ಈಗಿನ ಸ್ಥಿತಿ ಅರಿಯಲು ಇಚ್ಛೆಪಡುತ್ತಾನೆ. ಆಗ ತನ್ನ ಆಸ್ಥಾನದಲ್ಲಿ ನೇಮಿಸಿಕೊಂಡ ಮಂತ್ರಿಗೆ ತನ್ನ ಮನದ ಮಾತು ಹೇಳಿ ಒಂದು ಔತಣ ಕೂಟ ಏರ್ಪಡಿಸಿ